ಅಧ್ಯಕ್ಷರು:– ನಾನು ಅದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು:– ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಬಂಧನ ಏತಕ್ಕೆ, ಯಾವ ಉದ್ದೇಶಕ್ಕೋಸ್ಕರ ಬಂಧಿಸಿದ್ದಾರೆ ಎಂಬುದನ್ನು ಸದನಕ್ಕೆ ತಾವು ತಿಳಿಸಬೇಕು. ನಮಗೆ ಇದು ಗೊತ್ತಾಗುತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಅವರು ಪೋಲೀಸ್ ವ್ಯಾನ್‌ನಲ್ಲಿ ಹೋಗುತ್ತಿರುವುದನ್ನು ನೋಡಿದ ಮೇಲೆ ಗೊತ್ತಾಯಿತು. ಈ ಬಂಧನದ ಉದ್ದೇಶ ಏನು? ದೆಹಲಿಯಲ್ಲಿ ಯಾವುದೋ ಮೇಳ ಮಾಡಿದರೆ, ಆ ಮೇಳವನ್ನು ಕೇಂದ್ರ ಸರ್ಕಾರ ರದ್ದುಪಡಿಸಿ ಈ ದೇಶಕ್ಕೆ ಒಂದು ರೀತಿಯ ಅಪಚಾರ ಮಾಡಿದೆ., ಇದನ್ನು ಯಾರೂ ಒಪ್ಪುತ್ತಿಲ್ಲ. ಯಾವ ಪಕ್ಷದವರೂ ಸಹ ಈ ಮೇಳವನ್ನು ಸಹ ರದ್ದು ಮಾಡಬೇಕೆಂದು ಒಪ್ಪುತ್ತಿಲ್ಲ. ರಾಜ್ಯ ಸರ್ಕಾರಕ್ಕೆ ಯಾವ ನೀತಿ ಇದೆ, ಶಾಸನಸಭೆ ನಡೆಯುವಾಗ ಶಾಸಕರು ಬಂದು, ಈ ಪ್ರಜಾಪ್ರಭುತ್ವದ ಮನೆಯಲ್ಲಿ ಮಾತನಾಡತಕ್ಕ ಅವಕಾಶ ಇಲ್ಲ ಎನ್ನುವುದಾದರೆ ಹೇಗೆ?

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ನಿಮಗೆ ಅವಕಾಶವನ್ನು ಕಲ್ಪಿಸಿಕೊಡುತ್ತೇವೆಂದು ಹೇಳಿದ್ದೇನೆ. ಈಗ ಪ್ರಶ್ನೋತ್ತರ ಸಮಯ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಪ್ರಶ್ನೋತ್ತರ ಸಮಯವನ್ನು ಬದಿಗೊತ್ತಿ. ದಯವಿಟ್ಟು ವಿರೋಧ ಪಕ್ಷದ ನಾಯಕರ ಗಮನಕ್ಕಾದರೂ ... ಪ್ರಶ್ನೋತ್ತರ ಸಮಯ ಬೇಡ ಅಂತ ಹೇಳುವುದಿಲ್ಲ. ಆದರೆ ಒಬ್ಬ ವಿರೋಧ ಪಕ್ಷದವರನ್ನು ಈ ರೀತಿ .....

ಅಧ್ಯಕ್ಷರು:– ಇದಾದ ತಕ್ಷಣ ಸಮಯ ಕೊಡುತ್ತೇನೆ.

ಸಂತಾಪ ಸೂಚನೆ ನಿರ್ಣಯ

ಅಧ್ಯಕ್ಷರು:– ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಹಾಗೂ ಗಡಿನಾಡಿನ ಕನ್ನಡದ ದೀಪ ಡಾ।। ಶ್ರೀ ಮುಗುಳಿಯವರು ದಿನಾಂಕ: 20–2–1993ರಂದು ನಿಧನ ಹೊಂದಿದರು. ಕನ್ನಡ ಸಾಹಿತ್ಯ ಲೋಕದ ರಸಿಕರೆಂದು ಖ್ಯಾತರಾಗಿದ್ದ ಡಾ।। ಮುಗುಳಿಯವರು ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಸಾಹಿತ್ಯ ಚರಿತ್ರೆಗಳಲ್ಲಿ ವೈವಿಧ್ಯಮಯ ಸೇವೆಯನ್ನು ಸಲ್ಲಿಸಿ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಶಿಲ್ಪಿಯಾಗಿ ಕನ್ನಡನಾಡನ್ನು ಶ್ರೀಮಂತಗೊಳಿಸಿರುತ್ತಾರೆ. ಕನ್ನಡ ಮತ್ತು ಮರಾಠಿ ಭಾಷೆ ಸಾಹಿತ್ಯಗಳ ಸ್ನೇಹಸೇತುವೆಯಾಗಿ ಸುಮಧುರ ಬಾಂಧವ್ಯವನ್ನು ಬೆಳೆಸಿದರಲ್ಲದೆ ಶಿಕ್ಷಣ ರಂಗದಲ್ಲಿಯೂ ಸಹ ಅಮೋಘವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ಸ್ವಾತಂತ್ರ್ಯ ಚಳುವಳಿ ಹಾಗೂ ಮಹಾತ್ಮಾ ಗಾಂಧಿಯವರು ಕರೆ ನೀಡಿದ್ದ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಈ ದೇಶಪ್ರೇಮಿಯ ಹಿರಿಮೆಗಾಗಿ ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯನ್ನು, ವಿಶ್ವವಿದ್ಯಾನಿಲಯದವರು ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. 1963ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ಕೀರ್ತಿ ಶ್ರೇಯುತರಿಗೆ ಸಲ್ಲುತ್ತದೆ.

ಶ್ರೇಯುತರ ಗೌರವಾರ್ಥ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದದ ಉತ್ತರಗಳು

ನೆಲಮಂಗಲ ಕ್ಷೇತ್ರದಲ್ಲಿ ಆರಕ್ಷಕ ಠಾಣೆಗಳ ಸ್ಥಾಪನೆ

81 (491) ಶ್ರೀ ಅಂಜನ ಮೂರ್ತಿ (ನೆಲಮಂಗಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಮತ ಕ್ಷೇತ್ರಕ್ಕೆ ಸೇರಿದ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ.

1) ಕನಸಲಾಡಿ ಸಮೀಪ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ

2) ಅಂಚೆಪಾಳ್ಯ ಸಮೀಪ ಮಾಗಡಿ ತಾಲ್ಲೂಕು ಸೋಲೂರು ಹೋಬಳಿ

3) ಸೋಲೂರು ಗ್ರಾಮದ ಸಮೀಪದಲ್ಲಿ ಆಗಾಗ್ಗೆ ಗಲಭೆ, ಕಳ್ಳತನ, ಕೊಲೆ, ದರೋಡೆ ಮುಂತಾದವು ಜರುಗುತ್ತಿರುವುದನ್ನು ತಡೆಗಟ್ಟಲು ಸದರಿ ಸ್ಥಳಗಳನ್ನು ಒಂದೊಂದು ಪೋಲೀಸ್ ಠಾಣೆ ತೆರೆಯಬೇಕೆಂದು ಒತ್ತಾಯಿಸಿ ಮನವಿಗಳೇನಾದರೂ ಬಂದಿದೆಯೇ ?

ಆ) ಹಾಗಿದ್ದಲ್ಲಿ , ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಅಂಜನಮೂರ್ತಿ:- ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರಕ್ಕೆ ಸೇರಿದ ಮೂರು ಜಾಗಗಳಲ್ಲಿ ಹೊಸದಾಗಿ ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಕಾರಣವೇನೆಂದರೆ ಅಲ್ಲಿ ಹೆಚ್ಚಿನ ವಾಹನ ಸಂಚಾರ, ಜನಸಂದಣಿ ಇದ್ದು ಆಗ್ಗಾಗ್ಗೆ ಸಮಾಜಘಾತುಕರಿಂದ ಕೊಲೆ, ಸುಲಿಗೆ, ದರೋಡೆ, ಹೆಚ್ಚಿನ ಅಪಘಾತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಎರಡನೆಯದಾಗಿ ನಾನು ಸತತವಾಗಿ ಕಳೆದ ಮೂರು ವರ್ಷಗಳಿಂದ ನಾಗರೀಕರ ಹಿತದೃಷ್ಟಿಯಿಂದ ಆ ಮೂರು ಜಾಗಗಳಲ್ಲಿ ಪೋಲೀಸ್ ಠಾಣೆ ಆಗಬೇಕೆಂದು ಒತ್ತಾಯ ಮಾಡುತ್ತಿದ್ದರೂ ಅವರು ಉತ್ತರದಲ್ಲಿ ಮನವಿ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಕಳೆದ ವರ್ಷ ಆಗಿನ ಗೃಹ ಸಚಿವವಾಗಿದ್ದ ಮಾನ್ಯ ಧರ್ಮಸಿಂಗ್‌ರವವು ಸ್ಥಳಕ್ಕೆ ಬಂದಾಗ ನಾಗರೀಕರ ಮನವಿ ಮೇರೆಗೆ ಪೋಲೀಸ್ ಠಾಣೆಯನ್ನು ಮಂಜೂರು ಮಾಡಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿರುವುದು ಸರ್ಕಾರದ ಗಮನದಲ್ಲಿಲ್ಲವೇ ? ಆದರೂ ಕೂಡ ಅವರ ಈ ಉತ್ತರ ನೋಡಿದಾಗ ನಿರಾಸೆಯಾಗುತ್ತದೆ. ಕೆಲವು ಅಮಾಯಕ ನಾಗರೀಕರಿಗೆ ಆಗುತ್ತಿರುವ ತೊಂದರೆ, ಕಿರುಕುಳವನ್ನು ತಪ್ಪಿಸಲು ಅಲ್ಲಿ ಮೂರು ಪೋಲೀಸ್ ಠಾಣೆಗಳನ್ನು ಸರ್ಕಾರ ಹೊಸದಾಗಿ ಮಂಜೂರು ಮಾಡುವುದಕ್ಕೆ ಕ್ರಮ ಕೈಗೊಳ್ಳುವುದೇ ? ಇದರ ಬಗ್ಗೆ ಖಚಿತವಾಗಿ ಉತ್ತರ ಕೊಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮನಾಥ ರೈ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಆದರೂ ಕೂಡ ಈಗ ಅವರು ಕೇಳಿದಂತಹ ಮೂರು ಜಾಗಗಳ ಪ್ರದೇಶವನ್ನು